

# ವಿಶ್ವಕಪ್‌ನಲ್ಲಿ ನೆದರ್ಲೆಂಡ್ಸ್ ಪ್ರಾಬಲ್ಯ

ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ನೆದರ್ಲೆಂಡ್ಸ್ ಪ್ರಾಬಲ್ಯ ಮೆರೆದಿದೆ.

1974ರಲ್ಲಿ ಮೊದಲ ಬಾರಿಗೆ ಟೂರ್ನಿ ಆಯೋಜನೆಯಾದಾಗ ಆರಂಭದ ಆರು ವರ್ಷ ಮೂರು ವರ್ಷಗಳಿಗೊಮ್ಮೆ ನಡೆಯುತ್ತಿತ್ತು. ಬಳಿಕ ನಾಲ್ಕು ವರ್ಷಕ್ಕೆ ವಿಸ್ತರಿಸಲಾಯಿತು. ಇದುವರೆಗೆ 14 ಬಾರಿ ವಿಶ್ವಕಪ್ ನಡೆದಿದ್ದು, ಎಂಟು ಸಲ ನೆದರ್ಲೆಂಡ್ಸ್ ಚಾಂಪಿಯನ್ ಆಗಿದೆ. ನಾಲ್ಕು ಬಾರಿ ರನ್ನರ್ಸ್ ಅಪ್ ಸ್ಥಾನ ಪಡೆದಿದೆ. ಅಂದರೆ, ಒಟ್ಟು 12 ಬಾರಿ ಫೈನಲ್ ಪ್ರವೇಶಿಸಿದೆ.

ಇದನ್ನು ಹೊರತುಪಡಿಸಿದರೆ ಅರ್ಜೆಂಟೀನಾ, ಆಸ್ಟ್ರೇಲಿಯಾ ಮತ್ತು ಜರ್ಮನಿ ತಂಡಗಳು ತಲಾ ಎರಡು ಬಾರಿ ಟ್ರೋಫಿ ಗೆದ್ದುಕೊಂಡಿವೆ. ಅರ್ಜೆಂಟೀನಾ ಮತ್ತು ಆಸ್ಟ್ರೇಲಿಯಾ ತಂಡಗಳು ತಲಾ ಐದು ಬಾರಿ ಫೈನಲ್ ಪ್ರವೇಶಿಸಿದ್ದು ನೆದರ್ಲೆಂಡ್ಸ್ ಬಳಿಕದ ಪ್ರಬಲ ತಂಡಗಳಾಗಿ ಹೊರಹೊಮ್ಮಿವೆ.

ಈ ಬಾರಿಯ ವಿಶೇಷವೆಂದರೆ ವಿಶ್ವಕಪ್ ಆರಂಭವಾದಾಗಿನಿಂದ ಪ್ರತಿ ವರ್ಷ ಗರಿಷ್ಠ 12 ತಂಡಗಳು ಪೈಪೋಟಿ ನಡೆಸುತ್ತಿದ್ದವು. 2002ರಲ್ಲಿ ಆಸ್ಟ್ರೇಲಿಯಾದ ಪರ್ತ್‌ನಲ್ಲಿ ನಡೆದಿದ್ದ ಟೂರ್ನಿಯಲ್ಲಿ 16 ತಂಡಗಳು ಭಾಗವಹಿಸಿದ್ದವು. ಹದಿನಾರರ ಸಂಭ್ರಮ ಈಗ ಎರಡನೇ ಬಾರಿ ವಿಶ್ವಕಪ್ ಇತಿಹಾಸದಲ್ಲಿ ಪುನರಾವರ್ತನೆಗೊಳ್ಳುತ್ತಿದೆ.

ಆಟದ ಗುಣಮಟ್ಟವೂ ಹೆಚ್ಚಾಗಿದೆ. ಹೀಗಾಗಿ ಭಾರತ ತಂಡವನ್ನು ಉಳಿದ ರಾಷ್ಟ್ರಗಳು ಹಗುರವಾಗಿ ಪರಿಗಣಿಸಿಲ್ಲ.

ಪ್ರೊ ಲೀಗ್‌ನಲ್ಲಿ ಉಳಿದ ಪಂದ್ಯಗಳಲ್ಲಿ ಆಡಲಿರುವ ಭಾರತ ತಂಡವನ್ನು ಸವಿತಾ ಪೂನಿಯಾ ಮುನ್ನಡೆಸಲಿದ್ದಾರೆ. ದೀಪ್ ಗ್ರೇಸ್ ಎಕ್ಕಾ, ಗುರ್ಜಿತ್ ಕೌರ್, ನಿಕ್ಕಿ ಪ್ರಧಾನ್, ಉದಿತಾ, ಈಶಿಕಾ ಚೌಧರಿ, ಅಕ್ಷತಾ ಢೇಖಲೆ, ಮಿಡ್ ಫೀಲ್ಡರ್‌ಗಳಾದ ನಿಶಾ, ಸುಶೀಲಾ ಚಾನು, ಮೋನಿಕಾ, ನೇಹಾ, ಜ್ಯೋತಿ, ನವಜ್ಯೋತ್ ಕೌರ್, ಸೋನಿಕಾ, ಸಲಿಮಾ ಟೆ., ಬಲ್ಜೀತ್ ಕೌರ್, ಫಾರ್ವರ್ಡ್ ಆಟಗಾರ್ತಿಯರಾದ ವಂದನಾ ಕಟಾರಿಯಾ, ನವನೀತ್ ಕೌರ್, ಶರ್ಮಿಳಾ ದೇವಿ, ಸಂಗೀತಾ ಕುಮಾರಿ, ದೀಪಿಕಾ ಮತ್ತು ರಾಣಿ ರಾಂಪಾಲ್ ತಂಡದಲ್ಲಿದ್ದಾರೆ. ಬಹುತೇಕ ಇದೇ ತಂಡ ವಿಶ್ವಕಪ್‌ಗೂ ಮುಂದುವರಿಯುವ ಸಾಧ್ಯತೆಯಿದೆ.

ಈಗಾಗಲೇ ಯೂರೋಪ್ ರಾಷ್ಟ್ರಗಳ ಪ್ರವಾಸ ಕೈಗೊಂಡಿರುವ ಭಾರತ ಅಲ್ಲಿನ ಹವಾಗುಣಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿದೆ. ನಾಯಕಿ ಸವಿತಾ ಪೂನಿಯಾ ಮತ್ತು ನವನೀತ್ ಕೌರ್ 'ಎದುರಾಳಿ ತಂಡದ ಸಾಮರ್ಥ್ಯಕ್ಕಿಂತ ನಮ್ಮ ತಂಡದ ಶಕ್ತಿಯ ಮೇಲೆ ಭರವಸೆಯಿದೆ. ಮೊದಲಾದರೆ ಬಲಿಷ್ಠ ತಂಡಗಳ ಎದುರು ಆಡಬೇಕಾದರೆ ಒಂದಷ್ಟು ಅಳುಕು ಮನಸ್ಸಿನಲ್ಲಿ ಕಾಡುತ್ತಿತ್ತು. ಒಲಿಂಪಿಕ್ಸ್‌ನಲ್ಲಿನ ಸಾಧನೆ ನಮ್ಮ ವಿಶ್ವಾಸ ಹೆಚ್ಚಿಸಿದೆ. ಎದುರಾಳಿ ಯಾವ ತಂಡವಾದರೂ ನಾವೇ ಗೆಲ್ಲುತ್ತೇವೆ ಎನ್ನುವ ಆತ್ಮವಿಶ್ವಾಸ ನಮ್ಮಲ್ಲಿ ಮೂಡಿದೆ' ಎಂದಿರುವುದು ತಂಡದ ಆತ್ಮವಿಶ್ವಾಸವನ್ನು ಸೂಚಿಸುವಂತಿದೆ.

## ಕೋಚ್ ಬಲ

ಒಂದು ವರ್ಷದ ಹಿಂದೆ ಭಾರತ ಮಹಿಳಾ ತಂಡಕ್ಕೆ ಕೋಚ್ ಆಗಿರುವ ಜಾನ್ನೆಕೆ ಸ್ಕೂಪ್‌ಮನ್ ಅವರ ಗರಡಿಯಲ್ಲಿ ಆಟಗಾರ್ತಿಯರು ಚೆನ್ನಾಗಿ ಪಳಗಿದ್ದಾರೆ.

ಸ್ಕೂಪ್‌ಮನ್ ನೆದರ್ಲೆಂಡ್ಸ್‌ನ ತಂಡದ ಮಾಜಿ ಆಟಗಾರ್ತಿ. ಈ ತಂಡ 2004ರ ಅಥೆನ್ಸ್ ಮತ್ತು 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕ್ರಮವಾಗಿ ಬೆಳ್ಳಿ ಹಾಗೂ ಚಿನ್ನದ ಪದಕ ಜಯಿಸಿದ್ದಾಗ ತಂಡದಲ್ಲಿದ್ದರು. ಡಿಫೆಂಡರ್ ಆಟಗಾರ್ತಿಯಾಗಿದ್ದ ಅವರು ತಮ್ಮ ತಂಡ ವಿಶ್ವಕಪ್ ಗೆದ್ದಾಗ ಮೂರು ಬಾರಿ ಸದಸ್ಯರಾಗಿದ್ದರು. 2010ರಲ್ಲಿ ನಿವೃತ್ತಿಯಾದ ಬಳಿಕ ತರಬೇತಿಯತ್ತ ಗಮನ ಹರಿಸಿದರು.

ಮೊದಲು ತಮ್ಮದೇ ದೇಶದ ವಿವಿಧ ವಯೋಮಿತಿಯೊಳಗಿನ ತಂಡಕ್ಕೆ ಕೋಚ್ ಆಗಿದ್ದರು. ಅಮೆರಿಕದ ರಾಷ್ಟ್ರೀಯ ಹಾಕಿ ತಂಡಕ್ಕೆ ಸಹಾಯಕ ಕೋಚ್, ಮುಖ್ಯ ಕೋಚ್ ಆಗಿ ಕೆಲಸ ಮಾಡಿದ್ದಾರೆ. 2020ರ ಜನವರಿಯಿಂದ ಭಾರತ ತಂಡದ ವಿಶ್ಲೇಷಣಾತ್ಮಕ ತರಬೇತುದಾರರಾಗಿ ನೇಮಕವಾಗಿದ್ದರು. ಈಗ ಮುಖ್ಯ ಕೋಚ್ ಆಗಿ ಬಡ್ತಿ ಪಡೆದಿದ್ದಾರೆ.

ನೆದರ್ಲೆಂಡ್ಸ್ ಮಹಿಳಾ ತಂಡ ಅಭ್ಯಾಸ ಮಾಡುವ ವಿಧಾನ, ಆಟದ ವೇಳೆ ಉಪಯೋಗಿಸುವ ತಂತ್ರಗಳು ಮತ್ತು ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ರೂಪಿಸುವ ಯೋಜನೆಗಳು ಏಷ್ಯಾ ರಾಷ್ಟ್ರಗಳ ತಂಡಗಳಿಗಿಂತಲೂ ಭಿನ್ನವಾಗಿರುತ್ತವೆ. ಹೀಗಾಗಿ ಉತ್ತಮ ಫಲಿತಾಂಶ ಲಭಿಸುತ್ತದೆ. ನೆದರ್ಲೆಂಡ್ಸ್ ಮಹಿಳಾ ತಂಡ ಒಲಿಂಪಿಕ್ಸ್‌ನಲ್ಲಿ ಹೆಚ್ಚು ಬಾರಿ (ನಾಲ್ಕು ಸಲ) ಚಿನ್ನದ ಪದಕ ಗೆದ್ದಿದೆ. ಎರಡು ಬಾರಿ ಬೆಳ್ಳಿ ಮತ್ತು ಮೂರು ಸಲ ಕಂಚು ಜಯಿಸಿದೆ. ಈ ಕಾರಣಕ್ಕಾಗಿಯೇ ಸ್ಕೂಪ್‌ಮನ್ ಭಾರತ ಮಹಿಳಾ ತಂಡದ ಮುಖ್ಯ ಕೋಚ್ ಆಗಿದ್ದು ದೇಶದ ಹಾಕಿ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುವ ನಿರೀಕ್ಷೆಯಿದೆ.

ಒಮ್ಮೆಯೂ ವಿಶ್ವಕಪ್ ಗೆಲ್ಲದ ಭಾರತ ಈಗ ನೆದರ್ಲೆಂಡ್ಸ್‌ನಲ್ಲಿ ಹೊಸ ಶಕ್ತಿಯಾಗಿ ಬದಲಾಗಲು ಕಾಯುತ್ತಿದೆ. ಅದೇ ದೇಶದವರೇ ಭಾರತ ತಂಡಕ್ಕೆ ಕೋಚ್ ಆಗಿದ್ದಾರೆ. ಅವರಿಗೆ ತವರಿನಲ್ಲಿ ತಾವು ತರಬೇತಿ ನೀಡುವ 'ತಮ್ಮ' ತಂಡವನ್ನು ಗೆಲ್ಲಿಸಬೇಕಾದ ಹೊಣೆಗಾರಿಕೆಯಿದೆ.

ಪ್ರತಿಕ್ರಿಯಿಸಿ: feedback@sudha.co.in